**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಸಿಸಿ ನಂ 694/2012**

**ಸಿ.ಡಬ್ಲೂ: 09  ಪಿಡಬ್ಲೂ: 10**

| | |
|---|---|
| ಸಾಕ್ಷಿದಾರರ ಹೆಸರು | ವಿಕ್ರಾಂತ್ |
| ತಂದೆಯ ಹೆಸರು | ಸೋಮಪ್ಪ |
| ವಯಸ್ಸು | ಸುಮಾರು 47 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ತ್ಯಾಮಗೊಂಡ್ಲು |

**ದಿನಾಂಕ: 18.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಅಭಿಯೋಜಕ ರವರಿಂದ**

ಆರೋಪಿತರು ಗೊತ್ತು. ಚಾಸಾ-1 ರಿಂದ 8, 10 ಮತ್ತು 11 ರವರು ಗೊತ್ತು. 2008 ರ ನವೆಂಬರ್ ತಿಂಗಳಿನಲ್ಲಿ 1 ನೇ ಆರೋಪಿ ಮತ್ತು ಚಾಸಾ-1 ರವರ ಮದುವೆಯಾಗಿರುತ್ತದೆ. 32 ಗ್ರಾಂ ಚಿನ್ನದ ಚೈನ್, 24 ಗ್ರಾಂ ಚಿನ್ನದ ಬ್ರಾಸ್ಲೆಟ್, 6 ಗ್ರಾಂ ಚಿನ್ನದ ಉಂಗುರ ಹಾಗೂ ರೂ. 50,000/- ಹಣವನ್ನು ಬಟ್ಟೆ ಖರೀದಿಗಾಗಿ ಸಂಪ್ರದಾಯದಂತೆ ನೀಡಿರುತ್ತಾರೆ. ಮದುವೆಯಾದ 3 ವರ್ಷಗಳವರೆಗೂ ಚೆನ್ನಾಗಿದ್ದರು. ನಂತರ ಚುನಾವಣೆಗೆ ಸ್ಪರ್ಧಿಸುವುದಾಗಿ ಅದಕ್ಕೆ ರೂ. 25,00,000/- ಹಣ ಬೇಕಾಗಿದ್ದು, ಅದನ್ನು ತೆಗೆದುಕೊಂಡು ಬರುವಂತೆ ಚಾಸಾ-1 ರವರಿಗೆ ಕಿರುಕುಳ ನೀಡುತ್ತಿದ್ದರು ಹಾಗೂ 1 ನೇ ಆರೋಪಿಗೆ 2 ಮತ್ತು 3 ನೇ ಆರೋಪಿತರು ಪ್ರಚೋದನೆ ನೀಡುತ್ತಿದ್ದರು. ಹಾಗೂ ಅವರು ಸರ್ಕಾರಿ ಕೆಲಸ ಪಿ.ಡಿ.ಓ. ನೇಮಕಾತಿಗೆ ಹಣ ಬೇಕಾಗಿದ್ದು, ರೂ. 50,00,000/-ಗಳನ್ನು ತವರು ಮನೆಯಿಂದ ತೆಗೆದುಕೊಂಡು ಬರುವಂತೆ ಚಾಸಾ-1 ರವರಿಗೆ ಕಿರುಕುಳ ನೀಡುತ್ತಿದ್ದರು. ಇದರ ವಿಚಾರವಾಗಿ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪ್ರಸ್ತುತವಾಗಿ ಪ್ರಕರಣ ನಡೆಯುತ್ತಿರುತ್ತದೆ. ಇದನ್ನು ಹೊರತುಪಡಿಸಿ ರೂ. 2,75,000/-ಗಳನ್ನು ಬೇರೆ ಮನೆ ಮಾಡುವ ಸಲುವಾಗಿ ಚಾಸಾ-1 ರವರ ತಂದೆಯಿಂದ ಪಡೆದುಕೊಂಡಿರುತ್ತಾರೆ. ಸದರಿ

ವಿಚಾರವಾಗಿ ನ್ಯಾಯಪಂಚಾಯಿತಿ ಆದರೂ ಸಹ ರಾಜೀ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ಈ ದಿನ ಗೈರು ಹಾಜರಿದ್ದು, ಅವರನ್ನು ನೋಡಿ ಗುರುತಿಸುವಲ್ಲಿ ಆರೋಪಿ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ. ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಈ ಸಮಯದಲ್ಲಿ ಮಾನ್ಯ ಸ. ಸ. ಅ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲಿಗೆ ಅನುಮತಿ ಕೋರಲಾಗಿ, ನೀಡಲಾಯಿತು.**

**ಪಾಟೀಸವಾಲುಃ ಮಾನ್ಯ ಎ ಪಿ ಪಿ ರವರಿಂದ**

ಚಾಸಾ-1 ರವರ ಹತ್ತಿರವಿದ್ದ ಮಾಂಗಲ್ಯ ಚೈನ್‌ನ್ನು ಕಿತ್ತುಕೊಂಡು ಮನೆಯಿಂದ ಹೊರಹಾಕಿರುವ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿ. ಚಾಸಾ-1 ರವರ ತಂದೆ, ತಾಯಿ ಮತ್ತು ಅಣ್ಣನ ಹತ್ತಿರ ಇರುವ ಆಸ್ತಿಯನ್ನು ಅವರ ಹೆಸರಿಗೆ ಮಾಡಿಕೊಡಬೇಕೆಂದು ಮಾಡದೇ ಹೋದರೆ ಚಾಸಾ-1 ರವರಿಗೆ ಪ್ರಾಣ ಬೆದರಿಕೆ ಹಾಕಿರುವ ವಿಷಯ ನನಗೆ ತಿಳಿದಿರುತ್ತದೆ ಎಂದರೆ ಸರಿ. ದಿಃ 01.01.2012 ರಂದು 1 ನೇ ಆರೋಪಿಯು ಚಾಸಾ-1 ರವರಿಗೆ ವಿಚ್ಛೇದನ ಪತ್ರಕ್ಕೆ ಸಹಿ ಹಾಕದೆ ಹೋದರೆ ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿರುವ ವಿಷಯ ನನಗೆ ಗೊತ್ತಿಲ್ಲ. ಸದರಿ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಚಾಸಾ-1 ರವರು ನನ್ನ ಚಿಕ್ಕಮ್ಮನ ಮಗಳು. ಮದುವೆಯ ಮೊದಲು ನಡೆದ ಮಾತುಕತೆಗೆ ನಾನು ಹೋಗಿರುತ್ತೇನೆ. ಸದರಿ ವೇಳೆಯಲ್ಲಿ ಯಾವುದೇ ವಿಷಯವನ್ನು ಬರವಣಿಗೆಯಲ್ಲಿ ಮಾಡಿರುವುದಿಲ್ಲ. ಸಾಮಾನ್ಯವಾಗಿ ಒಕ್ಕಲಿಗರ ಸಮುದಾಯದಲ್ಲಿ ಮದುವೆಯನ್ನು ಹೆಣ್ಣುಮಕ್ಕಳ ಮನೆಯವರೇ ಮಾಡಿಕೊಡುತ್ತಾರೆ ಎಂದರೆ ಸರಿ. ಹಾಗೂ ಸಾಂಪ್ರದಾಯಿಕವಾಗಿ ಆರ್ಥಿಕವಾಗಿ ಶಕ್ತರಾಗಿರುವಂತಹವರು ವರನಿಗೆ ಒಡವೆಗಳನ್ನು ಹಾಗೂ

ಬಟ್ಟೆಗಳನ್ನು ನೀಡುತ್ತಾರೆ ಎಂದರೆ ಸರಿ. ಚಾಸಾ-1 ರವರ ತಂದೆ ಆರ್ಥಿಕವಾಗಿ ಶಕ್ತರಾಗಿದ್ದಾರೆ ಎಂದರೆ ಸರಿ. ಸಾಮಾನ್ಯವಾಗಿ ಒಕ್ಕಲಿಗರ ಸಮುದಾಯದಲ್ಲಿ ಮದುವೆಯನ್ನು ಹೆಣ್ಣುಮಕ್ಕಳ ಊರಿನಲ್ಲಿಯೇ ಮಾಡಿಕೊಡುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಊರಿನಲ್ಲಿ ಯಾವುದೇ ಚೆನ್ನಾಗಿ ಚೌಟರಿ ಇಲ್ಲದೇ ಇರುವ ಕಾರಣ ಬೇರೆ ಕಡೆ ಮದುವೆ ಮಾಡಿಕೊಡಲಾಯಿತು ಎಂದು ನುಡಿಯುತ್ತಾರೆ. ಅದು ದೊಡ್ಡಬಳ್ಳಾಪುರದ ಮಾಂಗಲ್ಯ ಚೌಟರಿ ಆಗಿರುತ್ತದೆ.

ಮದುವೆ ಖರ್ಚು ವೆಚ್ಚಗಳನ್ನು ಚಾಸಾ-1 ರವರ ತಂದೆಯೇ ಭರಿಸಿರುತ್ತಾರೆ. ಚಾಸಾ-1 ರವರ ತಂದೆ ಮಾಡಿರುವ ಖರ್ಚು ವೆಚ್ಚಗಳ ಬಗ್ಗೆ ನನಗೆ ತಿಳಿಸಿರುತ್ತಾರೆ. ಮದುವೆಗೆ ಮಾಡಲಾದ ಖರ್ಚಿನ ರಶೀದಿಗಳನ್ನು ನಾನು ನೋಡಿರುವುದಿಲ್ಲ. ಮದುವೆಗೆ ಮುನ್ನ ನಿಶ್ಚಿತಾರ್ಥ ಮಾಡಿರುವುದಿಲ್ಲ. ನಾನು ಮದುವೆಯ ಖರ್ಚಿನ ರಶೀದಿಗಳನ್ನು ನೋಡದೇ ಇರುವ ಕಾರಣದಿಂದ ಮದುವೆಯ ಖರ್ಚನ್ನು ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ತಂದೆಯೇ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ-1 ರವರ ತಂದೆ ಆರ್ಥಿಕವಾಗಿ ಶಕ್ತರಾಗಿಲ್ಲದೇ ಇರುವ ಕಾರಣಕ್ಕೆ 1 ನೇ ಆರೋಪಿಯೇ ಮದುವೆಯನ್ನು ನಡೆಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರ ತಂದೆ ನೆಲಮಂಗಲದ ಬಸವಣ್ಣನ ಮಠದಲ್ಲಿ ಮದುವೆಯನ್ನು ಮಾಡಿಕೊಡುವುದಾಗಿ ಹೇಳಿದ್ದು, 1 ನೇ ಆರೋಪಿಯು ಜನ ಜಾಸ್ತಿ ಬರುವ ಕಾರಣಕ್ಕೆ ಮದುವೆಯನ್ನು ಅವರೇ ಮಾಂಗಲ್ಯ ಚೌಟರಿಯಲ್ಲಿ ಮಾಡಿಕೊಳ್ಳುತ್ತೇವೆ ಎಂದು ಹೇಳಿ ಅವರೇ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮದುವೆಯನ್ನು ಚಾಸಾ-1 ರವರ ತಂದೆಯೇ ಮಾಡಿರುತ್ತಾರೆ ಹಾಗೂ ಮದುವೆಯು ಮಾಂಗಲ್ಯ ಚೌಟರಿಯಲ್ಲಿಯೇ ನಡೆಯಬೇಕೆಂದು ಹೇಳಿರುವ ಕಾರಣಕ್ಕೆ ಅಲ್ಲಿಯೇ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮದುವೆಯು ಯಾವ ರೀತಿ ಮಾಡಬೇಕೆಂದು ಯಾವ ದಿನಾಂಕದಂದು ಮಾತುಕತೆ ಆಗಿರುತ್ತದೆ ಎಂದು ಗೊತ್ತಿಲ್ಲ.

32 ಗ್ರಾಂ ಚಿನ್ನದ ಚೈನ್, 24 ಗ್ರಾಂ ಚಿನ್ನದ ಬ್ರಾಸ್ಲೆಟ್, 6 ಗ್ರಾಂ ಚಿನ್ನದ ಉಂಗುರ ಹಾಗೂ ರೂ. 50,000/- ಹಣವನ್ನು ಬಟ್ಟೆ ಖರೀದಿಗಾಗಿ ಸಂಪ್ರದಾಯದಂತೆ ನೀಡಿರುತ್ತಾರೆ. ಮದುವೆಯ ನಂತರ 3 ವರ್ಷಗಳ ವರೆಗೂ ದೊಡ್ಡಬಳ್ಳಾಪುರದಲ್ಲಿಯೇ ವಾಸಿಸುತ್ತಿದ್ದರು. ಮೊದಲು ತೋಟದ ಮನೆಯಲ್ಲಿ ವಾಸಿಸುತ್ತಿದ್ದು, ನಂತರ ಒಂದು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ಮದುವೆಯಾದ ಮೂರೇ ದಿನಕ್ಕೆ ಬೇರೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಒಂದು ಮಗುವಾದ ನಂತರ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆ ವೇಳೆಯಲ್ಲಿ ನಾನು ಎರಡು ಬಾರಿ ಅವರ ಮನೆಗೆ ಹೋಗಿರುತ್ತೇನೆ. ಮದುವೆಯ ನಂತರ ಒಂದು ವರ್ಷ ಚೆನ್ನಾಗಿದ್ದು, ನಂತರ ಗಲಾಟೆ ಆಗುತ್ತಲೇ ಇತ್ತು ಹಾಗೂ ಯಾವ ದಿನಾಂಕದಂದು ದೂರನ್ನು ನೀಡಿರುತ್ತಾರೆ ಹಾಗೂ ನಾನು ಖುದ್ದಾಗಿ ಚಾಸಾ-1 ರವರ ಯೋಗಕ್ಷೇಮವನ್ನು ಕೇಳಿರುವುದಿಲ್ಲ. ಅವರ ತಂದೆ ತಾಯಿಯಿಂದ ವಿಚಾರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಯಾವ ತಾರೀಖಿನಂದು ಚುನಾವಣೆಗೆ ನಿಲ್ಲುವ ಸಲುವಾಗಿ ಹಣ ಕೇಳಿರುತ್ತಾರೆ ಎಂದು ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಎಂ.ಎಲ್.ಎ. ಚುನಾವಣೆಗೆ ನಿಂತು 1 ನೇ ಆರೋಪಿ ಸೋತಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಆರೋಪಿಯು ಯಾವುದೇ ಚುನಾವಣೆಗೆ ನಿಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಯಾವ ದಿನಾಂಕದಂದು 1 ನೇ ಆರೋಪಿಯು ರೂ. 25,00,000/-ಗಳನ್ನು ಬೇಡಿಕೆ ಮಾಡಿದ್ದರೆಂದು ಗೊತ್ತಿಲ್ಲ. ಕೇಳಿರುವ ವಿಷಯವನ್ನು ನನಗೆ ಚಾಸಾ-1 ರವರ ತಂದೆ ತಾಯಿ ತಿಳಿಸಿರುತ್ತಾರೆ. ರೂ. 25,00,000/-ಗಳನ್ನು ಕೇಳಿರುವ ವಿಚಾರವಾಗಿ ಚಾಸಾ-1 ರವರು ಪೋಲೀಸ್ ದೂರನ್ನು ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ಯಾವ ದಿನಾಂಕದಂದು 1 ನೇ ಆರೋಪಿಯು ರೂ. 50,00,000/-ಗಳನ್ನು ಬೇಡಿಕೆ ಮಾಡಿದ್ದರೆಂದು ಗೊತ್ತಿಲ್ಲ. ಕೇಳಿರುವ ವಿಷಯವನ್ನು ನನಗೆ ಚಾಸಾ-1 ಮತ್ತು ಅವರ ತಂದೆ ತಾಯಿ ತಿಳಿಸಿರುತ್ತಾರೆ. 1 ನೇ ಆರೋಪಿಯು ಚಾಸಾ-1 ರವರಿಗೆ ಯಾವ ದಿನಾಂಕದಂದು ಕಿರುಕುಳ ನೀಡಿರುತ್ತಾರೆ ಎಂದು

ಗೊತ್ತಿಲ್ಲ. ಚಾಸಾ-1 ರವರು ಒಂದು ದೂರನ್ನು ನೀಡಿರುವುದು ಮಾತ್ರ ತಿಳಿದಿರುತ್ತದೆ, ಬಾಕಿ ದೂರುಗಳ ಬಗ್ಗೆ ಗೊತ್ತಿಲ್ಲ. ಯಾವ ದಿನಾಂಕದಂದು ರೂ. 2,75,000/-ಗಳನ್ನು ಕೇಳಿರುತ್ತಾರೆ ಎಂದು ಗೊತ್ತಿಲ್ಲ. ನ್ಯಾಯ ಪಂಚಾಯಿತಿ ಯಾವ ದಿನಾಂಕದಂದು ಮಾಡಲಾಗಿರುತ್ತದೆ ಎಂದು ಗೊತ್ತಿಲ್ಲ. ಸದರಿ ವೇಳೆಯಲ್ಲಿ ಯಾವುದೇ ಬರವಣಿಗೆಯನ್ನು ಮಾಡಿರುವುದಿಲ್ಲ. ಚಾಸಾ-1 ಮತ್ತು 1 ನೇ ಆರೋಪಿಯ ಕೌಟುಂಬಿಕ ವಿಷಯಗಳನ್ನು ನಾನು ಚಾಸಾ-1 ಹಾಗೂ ಅವರ ತಂದೆ ತಾಯಿಯಿಂದ ತಿಳಿದುಕೊಂಡಿರುತ್ತೇನೆ, ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ.

ಚಾಸಾ-1 ರವರ ತಂದೆ ಯಾವ ದಿನಾಂಕದಂದು ಬೇರೆ ಮನೆ ಮಾಡಲು ಹಣವನ್ನು ನೀಡಿರುತ್ತಾರೆ ಎಂದು ಗೊತ್ತಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಒಂದು ಬಾರಿ ಪೋಲೀಸ್ ಠಾಣೆಗೆ ಹೋಗಿರುತ್ತೇನೆ, ಆ ಸಮಯದಲ್ಲಿ ಚಾಸಾ-1 ರವರು ದೂರು ನೀಡಲು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ-1 ರವರೇ ಮನೆಯನ್ನು ಬಿಟ್ಟು ಹೋಗಿದ್ದು, ಆ ಸಮಯದಲ್ಲಿ 1 ನೇ ಆರೋಪಿಯು ಚಾಸಾ-1 ರವರಿಗೆ ಸಂಸಾರ ಮಾಡಲು ಬರುವಂತೆ ನೋಟೀಸ್ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ನೋಟೀಸ್ ಸ್ವೀಕರಿಸಿದ ನಂತರ ಚಾಸಾ-1 ರವರು ಠಾಣೆಗೆ ಬಂದು ದೂರನ್ನು ನೀಡಿರುತ್ತಾರೆ ಎಂದರೆ ಗೊತ್ತಿಲ್ಲ.

ಚಾಸಾ-1 ರವರ ತಂದೆಗೆ 1 ನೇ ಆರೋಪಿಯು ಮನೆ ಅಳಿಯನನ್ನಾಗಿ ಮಾಡಿಕೊಳ್ಳಬೇಕೆಂಬ ಬಯಕೆ ಇತ್ತು ಎಂದರೆ ಸರಿಯಲ್ಲ. ಚಾಸಾ-1 ರವರ ವಿರುದ್ಧ 1 ನೇ ಆರೋಪಿಯು ವಿಚ್ಛೇದನ ಪ್ರಕರಣವನ್ನು ಹೂಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಚಾಸಾ-1 ರವರ ತಂದೆಯೇ 1 ನೇ ಆರೋಪಿಯು ನಮ್ಮ ಮನೆಗೆ ಮನೆಯ ಅಳಿಯನಾಗಿ ಬಂದರೆ ಅವರ ವಿರುದ್ಧ ಹೂಡಿರುವ ಎಲ್ಲಾ ಸುಳ್ಳು ಪ್ರಕರಣಗಳನ್ನು ಹಿಂಪಡೆಯುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ ಎಂದರೆ ಗೊತ್ತಿಲ್ಲ. ಚಾಸಾ-1 ರವರು 1 ನೇ

ಆರೋಪಿ ಹಾಗೂ ಅವರ ಕುಟುಂಬದ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಚಾಸಾ-1 ರವರ ಸಂಬಂಧಿಕರಾಗಿರುವ ಕಾರಣ ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಚಾಸಾ-1 ರವರಿಗೆ ಯಾವತ್ತು ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ .**